# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1077 |
| ಸದಸ್ಯರ ಹೆಸರು | : | ಶ್ರೀ ಟಿ.ಎನ್.ಜವರಾಯಿ ಗೌಡ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 25.08.2026 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡಗಳ ನಿರ್ಮಾಣಕ್ಕೆ ರೈತರಿಂದ ಭಾರಿ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡಗಳ ನಿರ್ಮಾಣಕ್ಕೆ ರೈತರಿಂದ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಬಂದಿದ್ದಲ್ಲಿ, ಈ ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನ ಗೊಳಿಸಲಾಗಿದೆಯೇ; (ವಿವರ ನೀಡುವುದು) | ಕೃಷಿ ಭಾಗ್ಯ ಯೋಜನೆಯನ್ನು, 2023-24 ನೇ ಸಾಲಿನಿಂದ ರಾಜ್ಯದಲ್ಲಿ ಮರುಜಾರಿಗೊಳಿಸಲಾಗಿದ್ದು, ಪ್ರಸ್ತುತ ರಾಜ್ಯಾದ್ಯಂತ ಕೃಷಿ ಹೊಂಡ ಹಾಗೂ ಪೂರಕ ಘಟಕಗಳನ್ನು ಪ್ಯಾಕೇಜ್ ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಗೆ ಒದಗಿಸಿದ ಅನುದಾನಕ್ಕೆ ಅನುಗುಣವಾಗಿ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನ ಮಾಡಲಾಗುತ್ತಿದೆ |
| ಇ) | 2024-25 ಮತ್ತು 2026-27ನೇ ಸಾಲಿನಲ್ಲಿ ಈ ಯೋಜನೆಯಡಿ ಎಷ್ಟು ಜನ ರೈತ ಫಲಾನುಭವಿಗಳನ್ನು ಗುರುತಿಸಲಾಗಿ ಅವರಿಗೆ ನೀಡಿರುವ ಸಹಾಯಧನದ ಮೊತ್ತವೆಷ್ಟು; (ವಿವರ ನೀಡುವುದು) | 2024-25 ನೇ ಸಾಲಿನಲ್ಲಿ ಕೃಷಿ ಭಾಗ್ಯ ಮತ್ತು ಕೃಷಿ ಭಾಗ್ಯ (ಎಸ್.ಡಿ.ಎಂ.ಎಫ್.) ಯೋಜನೆಗಳಡಿ ಮತ್ತು 2026-27 ನೇ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಇಲ್ಲಿಯವರೆಗೆ ಒಟ್ಟು 18561 ಫಲಾನುಭವಿಗಳಿಗೆ ರೂ.20571.39 ಲಕ್ಷಗಳ ಸಹಾಯಧನ ನೀಡಲಾಗಿದ್ದು, ವಿವರಗಳು ಈ ಕೆಳಗಿನಂತಿವೆ. |

| ಕ್ರ. ಸಂ. | ಆರ್ಥಿಕ ವರ್ಷ | ಫಲಾನುಭವಿಗಳ ಸಂಖ್ಯೆ | ಸಹಾಯಧನ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2024-25 | 15525 | 18573.14 |
| 2 | 2026-27 (ದಿ:19.08.2026ರ ವರೆಗೆ) | 3036 | 1998.25 |
| | ಒಟ್ಟು | 18561 | 20571.39 |

| | | |
|---|---|---|
| ಈ) | ಯಾವ ಯಾವ ವರ್ಗದ ರೈತರಿಗೆ ಯಾವ ಮಾನದಂಡವನ್ನು ಅನುಸರಿಸಿ ಸಹಾಯಧನ ನೀಡಲಾಗುತ್ತಿದೆ;<br>(ವಿವರ ನೀಡುವುದು) | ಕೃಷಿ ಭಾಗ್ಯ ಯೋಜನೆಯನ್ನು ರಾಜ್ಯಾದ್ಯಂತ ಅನುಷ್ಠಾನ ಮಾಡಲಾಗುತ್ತಿದ್ದು, ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ಸರ್ಕಾರದ ನಿರ್ದಿಷ್ಟ ಅನುಪಾತದನ್ವಯ ಗುರಿಗಳನ್ನು ನಿಗದಿಪಡಿಸಿ ಅನುಷ್ಠಾನ ಮಾಡಲಾಗುತ್ತಿದೆ.<br>ಮುಂದುವರೆದು, ಎಲ್ಲಾ ವರ್ಗದ ರೈತರಿಗೆ ಅನ್ವಯಿಸುವಂತೆ ಕೃಷಿ ಭಾಗ್ಯ ಯೋಜನೆಯಡಿ ಒಟ್ಟು ಸಾಗುವಳಿ ಕ್ಷೇತ್ರದ ಒಂದು ಸರ್ವೆ ನಂಬರ್ ನಲ್ಲಿ ಕನಿಷ್ಠ 1.0 ಎಕರೆ ಹೊಂದಿದ ರೈತರಿಗೆ ಅವಶ್ಯಕತೆಯನ್ವಯ 10x10x3 ಮೀ/ 12x12x3 ಮೀ/ 15x15x3 ಮೀ/ 18x18x3 ಮೀ/ 21x21x3 ಮೀ ಅಳತೆಯ ಕೃಷಿ ಹೊಂಡ ನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತಿದೆ. ಕನಿಷ್ಠ 0.50 ಎಕರೆ ಸಾಗುವಳಿ ಕ್ಷೇತ್ರ ಹೊಂದಿದ ರೈತರಿಗೆ ಅವರ ಜಮೀನು ಒಳಗೊಂಡಂತೆ ಒಟ್ಟು ಮಳೆ ನೀರಿನ ಕ್ಯಾಚ್‌ಮೆಂಟ್ ಪ್ರದೇಶ ಕನಿಷ್ಠ 1.0 ಎಕರೆ ಇರುವುದನ್ನು ಖಚಿತಪಡಿಸಿಕೊಂಡು ರೈತರ ಅವಶ್ಯಕತೆಯ ಅನುಸಾರ ಕನಿಷ್ಠ ಅಳತೆಯ (ಕೆಂಪು/ಜಂಬಿಟ್ಟಿಗೆ ಮಣ್ಣಿನಲ್ಲಿ 10x10x3 ಮೀ/ 12x12x3 ಮೀ ಮತ್ತು ಕಪ್ಪು ಮಣ್ಣಿನಲ್ಲಿ 12x12x3 ಮೀ.) ಕೃಷಿ ಹೊಂಡ ನಿರ್ಮಿಸಲು ಸಹಾಯಧನ ನೀಡಲಾಗುತ್ತಿದೆ. ಈಗಾಗಲೇ ಕೃಷಿ ಭಾಗ್ಯ ಯೋಜನೆ ಅಥವಾ ಇನ್ಯಾವುದೇ ಯೋಜನೆಯಡಿ ಹಿಂದಿನ ಸಾಲುಗಳಲ್ಲಿ ಕೃಷಿ ಹೊಂಡ ಫಲಾನುಭವಿಯಾಗಿರುವ ರೈತರು ಸದರಿ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹತೆ ಹೊಂದಿರುವುದಿಲ್ಲ. |
| ಉ) | ಕೃಷಿ ಭಾಗ್ಯ ಅನುದಾನದ ಜತೆಗೆ ರಾಜ್ಯ ವಿಪತ್ತು ತಗ್ಗಿಸುವ ನಿಧಿಯ (ಎಸ್.ಡಿ.ಎಂ.ಎಫ್.)<br>ಅನುದಾನವನ್ನು ಕೃಷಿ ಇಲಾಖೆಯ ಯೋಜನೆಗೆ ಸೇರಿಸಲಾಗಿದೆಯೇ; ಹಾಗಿದ್ದಲ್ಲಿ, ಯಾವ ಯಾವ ಮಾದರಿಯ ಕೃಷಿ ಹೊಂಡಗಳಿಗೆ ಸಹಾಯಧನ ಒದಗಿಸಲಾಗುವುದು;<br>(ಸಂಪೂರ್ಣ ವಿವರ ನೀಡುವುದು) | ಕೃಷಿ ಭಾಗ್ಯ ಯೋಜನೆಗೆ ಕೃಷಿ ಇಲಾಖೆಯ ಆಯವ್ಯಯದಲ್ಲಿ ಒದಗಿಸಿದ ಅನುದಾನದೊಂದಿಗೆ ಕಂದಾಯ ಇಲಾಖೆಯಿಂದ ರಾಜ್ಯ ವಿಪತ್ತು ಉಪಶಮನ ನಿಧಿ (ಎಸ್.ಡಿ.ಎಂ.ಎಫ್.) ಅಡಿ ಒದಗಿಸಿದ ಅನುದಾನದಲ್ಲಿ ಕೃಷಿ ಭಾಗ್ಯ (ಎಸ್.ಡಿ.ಎಂ.ಎಫ್) ಯೋಜನೆಯನ್ನು ಕೃಷಿ ಭಾಗ್ಯ ಯೋಜನೆಯ ಮಾರ್ಗಸೂಚಿ ಅನುಸಾರ 2024-25 ಮತ್ತು 2025-26 ನೇ ಸಾಲಿನಲ್ಲಿ ಅನುಷ್ಠಾನ ಮಾಡಲಾಗಿರುತ್ತದೆ.<br>ಕೃಷಿ ಭಾಗ್ಯ ಯೋಜನೆಯಡಿ ಅನುಮೋದಿತ ಮಾರ್ಗಸೂಚಿ ಅನುಸಾರ ವಿವಿಧ ಅಳತೆಯ ಕೃಷಿ ಹೊಂಡಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಕೆಂಪು ಮತ್ತು ಜಂಬಿಟ್ಟಿಗೆ ಮಣ್ಣಿನಲ್ಲಿ 10x10x3 ಮೀ, 12x12x3 ಮೀ, 15x15x3 ಮೀ, 18x18x3 ಮೀ ಹಾಗೂ 21x21x3 ಮೀ ಅಳತೆಯ ಕೃಷಿ ಹೊಂಡಗಳಿಗೆ ಹಾಗೂ ಕಪ್ಪು ಮಣ್ಣಿನಲ್ಲಿ 12x12x3 ಮೀ, 15x15x3 ಮೀ, 18x18x3 ಮೀ ಹಾಗೂ 21x21x3 ಮೀ ಅಳತೆಯ ಕೃಷಿ ಹೊಂಡಗಳಿಗೆ ಸಹಾಯಧನ ನೀಡಲಾಗುತ್ತಿದೆ. ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಊ) | ಹಾಗಿದ್ದಲ್ಲಿ, ಈ ಸಹಾಯಧನ ಪ್ಯಾಕೇಜ್‌ನಲ್ಲಿ ಫೆನ್ಸಿಂಗ್ ಸೌಲಭ್ಯವನ್ನು ಕಲ್ಪಿಸಲಾಗಿದೆಯೇ. ಇದಕ್ಕಾಗಿ 2026-27ನೇ ಸಾಲಿನಲ್ಲಿ ಒದಗಿಸಿರುವ ಅನುದಾನವೆಷ್ಟು? (ಜಿಲ್ಲಾವಾರು ವಿವರವಾದ ಮಾಹಿತಿ ಒದಗಿಸುವುದು) | ಕೃಷಿ ಭಾಗ್ಯ ಯೋಜನೆಯ ಮಾರ್ಗಸೂಚಿಯಂತೆ ಕೃಷಿ ಭಾಗ್ಯ ಮತ್ತು ಕೃಷಿ ಭಾಗ್ಯ (ಎಸ್.ಡಿ.ಎಂ.ಎಫ್.) ಯೋಜನೆಗಳಡಿ ಪ್ಯಾಕೇಜ್ ಮಾದರಿಯಲ್ಲಿ ಕೃಷಿ ಹೊಂಡದೊಂದಿಗೆ ತಂತಿ ಬೇಲಿ (ಫೆನ್ಸಿಂಗ್) ಹಾಗೂ ಇತರೆ ಪೂರಕ ಘಟಕಗಳನ್ನು ಅನುಷ್ಠಾನ ಮಾಡಲು ಸಹಾಯಧನ ನೀಡಲಾಗುತ್ತದೆ.<br>2026-27 ನೇ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನ ಅನುಷ್ಠಾನಕ್ಕಾಗಿ ರೂ. 10000.00 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಇದರಲ್ಲಿ ತಂತಿ ಬೇಲಿ ಘಟಕಕ್ಕೆ ಅಂದಾಜು ರೂ.800.00 ಲಕ್ಷ ಅನುದಾನ ನಿಗದಿಪಡಿಸಲಾಗಿರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.<br>ಕೃಷಿ ಹೊಂಡದ ಅಳತೆಯನ್ನು ಆಧರಿಸಿ ತಂತಿ ಬೇಲಿ ಘಟಕಕ್ಕೆ ಸಾಮಾನ್ಯ ವರ್ಗದ ರೈತರಿಗೆ ಶೇ. 60 ರಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ. 75 ರಷ್ಟು ಸಹಾಯಧನ ನೀಡಲಾಗುತ್ತದೆ.<br>2026-27 ನೇ ಸಾಲಿನಲ್ಲಿ ರಾಜ್ಯ ವಿಪತ್ತು ಉಪಶಮನ ನಿಧಿ (ಎಸ್.ಡಿ.ಎಂ.ಎಫ್.) ಯಡಿ ಕೃಷಿ ಭಾಗ್ಯ ಯೋಜನೆ ಅನುಷ್ಠಾನಗೊಳಿಸಲು ಕಂದಾಯ ಇಲಾಖೆಯಿಂದ ಕೃಷಿ ಇಲಾಖೆಗೆ ರೂ. 10000.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲು ಸರ್ಕಾರಿ ಆದೇಶ ಸಂ: ಕಂಇ 468 ಟಿಎನ್‌ಆರ್ 2026, ದಿನಾಂಕ: 12.06.2026 ರಲ್ಲಿ ಅನುಮೋದನೆ ನೀಡಿ ಆದೇಶಿಸಲಾಗಿದ್ದು, ಅನುದಾನ ಬಿಡುಗಡೆ ನಿರೀಕ್ಷಿಸಲಾಗಿದೆ. ಸದರಿ ಅನುದಾನದಲ್ಲಿ ತಂತಿ ಬೇಲಿ (ಫೆನ್ಸಿಂಗ್) ಘಟಕಕ್ಕೆ ಅಂದಾಜು ರೂ. 800.00 ಲಕ್ಷ ಅನುದಾನ ಅವಶ್ಯವಿರುತ್ತದೆ. |

ಸಂಖ್ಯೆ: AGRI/136/ASC/2026

P. M. Narendraswamy

**(ಪಿ.ಎಂ.ನರೇಂದ್ರ ಸ್ವಾಮಿ)**

ಕೃಷಿ ಸಚಿವರು

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: LCQ - 1077

## ಅನುಬಂಧ -1

## ಕೃಷಿ ಭಾಗ್ಯ ಮತ್ತು ಕೃಷಿ ಭಾಗ್ಯ (ಎಸ್.ಡಿ.ಎಂ.ಎಫ್) ಯೋಜನೆಯಡಿ ಅನುಷ್ಠಾನಗೊಳಿಸುವ ವಿವಿಧ ಅಳತೆಯ ಕೃಷಿ ಹೊಂಡಗಳಿಗೆ ನೀಡುವ ಸಹಾಯಧನದ ವಿವರ:

| ಕ್ರ. ಸಂ. | ಕೃಷಿ ಹೊಂಡದ ಅಳತೆ (ಮೀ. ಗಳಲ್ಲಿ) | ಸಾಮಾನ್ಯ ವರ್ಗ (ಶೇ. 80 ರ ಸಹಾಯಧನ) (ರೂ. ಗಳಲ್ಲಿ) | ಪ.ಜಾತಿ/ ಪ.ಪಂಗಡ (ಶೇ. 90 ರ ಸಹಾಯಧನ) (ರೂ. ಗಳಲ್ಲಿ) |
|---|---|---|---|
| ಕೆಂಪು ಮಣ್ಣು | | | |
| 1 | 10x10x3 | 23,135 | 26,027 |
| 2 | 12x12x3 | 30,352 | 34,146 |
| 3 | 15x15x3 | 47,334 | 53,250 |
| 4 | 18x18x3 | 65,542 | 73,734 |
| 5 | 21x21x3 | 90,912 | 1,02,276 |
| ಕಪ್ಪು ಮಣ್ಣು | | | |
| 1 | 12x12x3 | 25,717 | 28,932 |
| 2 | 15x15x3 | 40,696 | 45,782 |
| 3 | 18x18x3 | 56,862 | 63,970 |
| 4 | 21x21x3 | 80,230 | 90,259 |
| ಜಂಬಿಟ್ಟಿಗೆ ಮಣ್ಣು | | | |
| 1 | 10x10x3 | 27,808 | 31,284 |
| 2 | 12x12x3 | 36,361 | 40,906 |
| 3 | 15x15x3 | 55,345 | 62,263 |
| 4 | 18x18x3 | 75,518 | 84,958 |
| 5 | 21x21x3 | 1,02,891 | 1,15,753 |

**ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: LCQ - 1077**

**ಅನುಬಂಧ - 2**

**2026-27 ನೇ ಸಾಲಿನ ಕೃಷಿ ಭಾಗ್ಯ ಯೋಜನೆಯಡಿ ತಂತಿ ಬೇಲಿ ಘಟಕಕ್ಕೆ ಜಿಲ್ಲಾವಾರು ನಿಗದಿಪಡಿಸಲಾದ ಅಂದಾಜು ಅನುದಾನದ ವಿವರ :**

| ಕ್ರ. ಸಂ. | ಜಿಲ್ಲೆ | ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 1 | ಬಾಗಲಕೋಟೆ | 31.12 |
| 2 | ಬೆಳಗಾವಿ | 55.10 |
| 3 | ಬಳ್ಳಾರಿ | 15.56 |
| 4 | ಬೆಂಗಳೂರು (ಗ್ರಾ) | 12.96 |
| 5 | ಬೆಂಗಳೂರು (ನ) | 5.51 |
| 6 | ಬೀದರ | 25.38 |
| 7 | ಚಾಮರಾಜನಗರ | 19.88 |
| 8 | ಚಿಕ್ಕಬಳ್ಳಾಪುರ | 27.22 |
| 9 | ಚಿಕ್ಕಮಗಳೂರು | 24.95 |
| 10 | ಚಿತ್ರದುರ್ಗ | 27.22 |
| 11 | ದಕ್ಷಿಣ ಕನ್ನಡ | 18.90 |
| 12 | ದಾವಣಗೆರೆ | 27.54 |
| 13 | ಧಾರವಾಡ | 25.38 |
| 14 | ಗದಗ | 22.68 |
| 15 | ಹಾಸನ | 29.38 |
| 16 | ಹಾವೇರಿ | 34.80 |
| 17 | ಕಲಬುರ್ಗಿ | 34.02 |
| 18 | ಕೊಡಗು | 10.05 |
| 19 | ಕೋಲಾರ | 26.46 |
| 20 | ಕೊಪ್ಪಳ | 18.15 |
| 21 | ಮಂಡ್ಯ | 31.76 |
| 22 | ಮೈಸೂರು | 35.54 |
| 23 | ರಾಯಚೂರು | 27.54 |
| 24 | ಬೆಂಗಳೂರು ದಕ್ಷಿಣ | 12.96 |
| 25 | ಶಿವಮೊಗ್ಗ | 31.00 |
| 26 | ತುಮಕೂರು | 55.10 |
| 27 | ಉಡುಪಿ | 9.72 |
| 28 | ಉತ್ತರ ಕನ್ನಡ | 35.64 |
| 29 | ವಿಜಯನಗರ | 25.92 |
| 30 | ವಿಜಯಪುರ | 27.00 |
| 31 | ಯಾದಗಿರಿ | 15.56 |
| **ಒಟ್ಟು** | | **800.00** |

(ಷರಾ: ಕ್ಷೇತ್ರ ಮಟ್ಟದಲ್ಲಿ ಫಲಾನುಭವಿಗಳು ವಾಸ್ತವಿಕವಾಗಿ ನಿರ್ಮಿಸುವ ಕೃಷಿ ಹೊಂಡದ ಅಳತೆಯನ್ನು ಆಧರಿಸಿ ತಂತಿ ಬೇಲಿ ಘಟಕದ ಸಹಾಯಧನ ನೀಡಲಾಗುವುದರಿಂದ ಮೇಲ ನೀಡಿದ ಅಂದಾಜು ಮೊತ್ತದಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇರುತ್ತದೆ.)